KAHS010068482022

Presented on : 28-12-2022
Registered on : 28-12-2022
Decided on : 12-06-2026
Duration : 3 years, 5 months, 15 days

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾಸನ

**ದಿನಾಂಕ 12 ನೇ ಜೂನ್ 2026**

ಉಪಸ್ಥಿತರು
ಶ್ರೀಮತಿ ಹೇಮಾವತಿ, ಬಿಬಿಎಂ. ಎಲ್.ಎಲ್.ಬಿ.
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾಸನ.

**S.C. No.335/2022**

ಫಿರ್ಯಾದುದಾರರುಃ ರಾಜ್ಯದ ಪರ ಹಳೇಬೀಡು ಪೋಲಿಸರು.

(ಪ್ರತಿನಿಧಿಸುವವರು ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿ◌ಃ ಗೌರೀಶ,
ಬಿನ್ ಕಂದಸ್ವಾಮಿ,
ಸುಮಾರು 46 ವರ್ಷ,
ಅಂಗಡಿಹಳ್ಳಿ ಗ್ರಾಮ,
ಮಾದಿಹಳ್ಳಿ ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

(ಪ್ರತಿನಿಧಿಸುವವರು ಶ್ರೀ. ಹೆಚ್.ಜಿ.ಆರ್. ವಕೀಲರು)

| | | |
|---|---|---|
| 1 | Date of commission of offences | 28.08.2022 |
| 2 | Date of report of occurrence | 28.08.2022 |
| 3 | Whether the accused is on bail or in judicial custody | Accused is on bail |
| 4 | Date of commencement of trial | 03.09.2025 |
| 5 | Date of closing of trial | 25.04.2026 |
| 6 | Name of the complainant | Keerthiraja |
| 7 | Offences charged | Sections 4, 3 of Explosive Substances Act and 427, 286 of Indian Penal Code |
| 8 | Opinion of the judge | As per final order |

## ತೀರ್ಪು

ಬೇಲೂರು ತಾಲ್ಲೂಕು ಹಳೇಬೀಡು ವೃತ್ತದ ಆರಕ್ಷಕ ಉಪನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಪ್ರಕ್ರೀಯಾ ಸಂಹಿತೆ ಕಲಂ 427, 286 ಮತ್ತು ಸ್ಪೋಟಕ ವಸ್ತುಗಳ ಕಾಯಿದೆ ಕಲಂ 4 ಮತ್ತು 3 ರನ್ವಯ ದೋಷಾರೋಪಣಾ ಪಟ್ಟಿಯನ್ನು ಆರೋಪಿತರ ವಿರುದ್ಧ ಸಲ್ಲಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಕೆಳಗಿನಂತಿದೆ.

ದಿನಾಂಕ 28.08.2022 ರಂದು ಆರೋಪಿತರು ಬೇಲೂರು ತಾಲ್ಲೂಕು ಮಾದಿಹಳ್ಳಿ ಹೋಬಳಿ ಅಂಗಡಿಹಳ್ಳಿ ಗ್ರಾಮದ ಸಾಕ್ಷಿ-2 ಮಂದಾಕಿನಿ ಅಲಿಯಾಸ್ ಲಿವರ್ ಮನೆಯ ಮೇಲಿನ ಸಿಮೆಂಟ್ ಶೀಟ್ ಮೇಲೆ ಸ್ಪೋಟಕ ತುಂಬಿದ ಡಬ್ಬಿಯನ್ನು ನಿರ್ಲಕ್ಷತೆಯಿಂದ ಒಣಗಲು ಇಟ್ಟಿದ್ದು ಮಧ್ಯಾಹ್ನ 1.15 ಗಂಟೆ ಸಮಯದಲ್ಲಿ ಸದರಿ ಸ್ಪೋಟಕದ ವಸ್ತು ಸಿಡಿದ ಪರಿಣಾಮ ಸಾಕ್ಷಿ-2 ರವರ ಮನೆಯ ಮೇಲ್ಭಾಗದ ಚಾವಣಿಯ ಸಿಮೆಂಟ್ ಶೀಟ್ ಛಿದ್ರಗೊಂಡು ಮನೆಯ ಒಳಗಡೆ ಬಿದ್ದ ಪರಿಣಾಮ ಮನೆಯ ಒಳಗಡೆ ಇದ್ದ ಸಾಕ್ಷಿ-2 ರವರಿಗೆ ಬಲ ಕೆನ್ನೆಗೆ, ಬಲಭಾಗದ ಹಣೆಗೆ, ಗದ್ದಕ್ಕೆ ಸಮಾನ್ಯ ಸ್ವರೂಪದ ಹಾಗೂ ಎಡಕೈಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಸಾಕ್ಷಿ-3 ಅಶ್ವಿನಿರವರಿಗೆ ತಲೆಗೆ, ಬಲಗಾಲಿಗೆ, ಎಡಗಾಲಿಗೆ, ಹೆಬ್ಬೆರಳಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಸಾಕ್ಷಿ-4 ರೋಜಾರವರಿಗೆ ಕುತ್ತಿಗೆಗೆ ಸಾಮಾನ್ಯ ಸ್ವರೂಪದ ಗಾಯಗಾಳಾಗಿದ್ದು, ಸಾಕ್ಷಿ-3 ರವರ ಎಳೆಮಗುವಿಗೆ ಎಡಗಾಲಿಗೆ ಪೆಟ್ಟಾಗಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಸಾಕ್ಷಿ-4 ರವರ 11 ದಿನದ ಮಗುವಿಗೆ ಕೆನ್ನೆಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ

ಹಾಗೂ ಸಾಕ್ಷಿ-2 ರವರ ಮನೆಗೆ ಸುಮಾರು 25 ಸಾವಿರ ರೂಪಾಯಿ ನಷ್ಟದ ಜಖಂಗಳಾಗಿರುತ್ತವೆ ಎಂಬುದಾಗಿರುತ್ತದೆ.

3. ದೂರನ್ನು ಸ್ವೀಕರಿಸಿದ ನಂತರ ಹಳೆಬೀಡು ಪೋಲಿಸ್ ಠಾಣೆಯ ಅರಕ್ಷಕ ಉಪನಿರೀಕ್ಷಕರು ಕಾನೂನು ಕ್ರಮ ಕೈಗೊಂಡು ಆರೋಪಿತರ ವಿರುದ್ದ ಅಪರಾದ ಸಂಖ್ಯೆ 187/2022 ರಂತೆ ಪ್ರಕರಣವನ್ನು ಭಾರತೀಯ ದಂಡ ಸಂಹಿತೆ ಕಲಂ 427 ಮತ್ತು 286 ಮತ್ತು ಸ್ಪೋಟಕ ವಸ್ತುಗಳ ಕಾಯಿದೆ ಕಲಂ 4 ಮತ್ತು 3 ರನ್ವಯ ದಂಡನೀಯ ಅಪರಾಧಕ್ಕೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಮುಕ್ತಾಯಗೊಂಡ ನಂತರ ವೃತ್ತ ನಿರೀಕ್ಷಕರು ಮೇಲ್ಕಂಡ ಆರೋಪಕ್ಕೆ ಆರೋಪಿತರ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಬೇಲೂರಿನ ಸಿವಿಲ್ ಜಡ್ಜ್ ಮತ್ತು ಜೆಎಂ.ಎಫ್.ಸಿ. ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ (ಇನ್ನು ಮುಂದೆ ಕಮಿಟಲ್ ಕೋರ್ಟ್ ಎಂದು ಕರೆಯಲ್ಪಡುತ್ತದೆ).

4. ಸದರಿ ಕಮಿಟಲ್ ನ್ಯಾಯಾಲಯ ಆರೋಪಿತರ ವಿರುದ್ದ ಮೇಲ್ಕಂಡ ಆಪಾಧನೆ ಸಂಬಂಧಿಸಿದಂತೆ ಸಂಜ್ಞೆಯತೆಯನ್ನು

ತೆಗೆದುಕೊಂಡು ಸಿಸಿ ನಂ.984/2022 ರಂತೆ ಕೇಸು ದಾಖಲಿಸಿರುತ್ತದೆ. ನಂತರ ಆರೋಪಿತರನ್ನು ದಿನಾಂಕ 06.09.2022 ರಂದು ಬಂಧಿಸಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತಾರೆ., ಆರೋಪಿತರು ಸದರಿ ನ್ಯಾಯಾಲಯದ ಮುಂದೆ ತನ್ನ ಪರವಾಗಿ ವಕೀಲರನ್ನು ನೇಮಿಸಿಕೊಂಡಿಲ್ಲ. ದಿನಾಂಕ 17.12.2022 ರ ಆದೇಶದಂತೆ ಕಮಿಟಲ್ ನ್ಯಾಯಾಲಯವು ಸದರಿ ಪ್ರಕರಣವನ್ನು ಹಾಸನ ಜಿಲ್ಲಾ ನ್ಯಾಯಾಲಯಕ್ಕೆ ಕಳಹಿಸಿರುತ್ತಾರೆ. ತದನಂತರದಲ್ಲಿ ಈ ಪ್ರಕರಣದಲ್ಲಿ ದಾಖಲಿಸಿಕೊಂಡು ಆರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಹಾಸನ ಜಿಲ್ಲಾ ಬಂಧಿಖಾನೆಯ ಸೂಪರಿಟೆಂಡಂಟ್ ರವರಿಗೆ ಅದೇಶಿಸಲಾಗಿತ್ತು ಅದರಂತೆ ಆರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ದಿನಾಂಕ 27.02.2023 ರಂದು ಆರೋಪಿತರನ್ನು ಈ ನ್ಯಾಯಾಲಯವು ಜಾಮೀನಿನ ಮೇಲೆ ಬಿಡುಗಡೆಗೊಳಿಸಿದೆ.

5. ಉಭಯ ಪಕ್ಷಕಾರರನ್ನು ಆಲಿಸಿದ ನಂತರ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ಮೇಲ್ಕಂಡ ಅಪರಾಧಕ್ಕಾಗಿ ರಚಿಸಿ ಮೇಲ್ಕಂಡ ಆರೋಪಿತರಿಗೆ ಓದಿ ಹೇಳಿದಾಗ ಸದರಿಯವರು ತಾನು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕೆಂದು ಹೇಳಿರುತ್ತಾರೆ.

6. ನಂತರ ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪವನ್ನು ಸಾಭೀತುಪಡಿಸಲು ಒಟ್ಟು 12 ಸಾಕ್ಷಿದಾರರನ್ನು ಅಸಾ.1 ರಿಂದ 12 ಎಂದು 20 ದಾಖಲೆಗಳನ್ನು ಒಳಗುರುತುಗಳೊಂದಿಗೆ ನಿ.ಪಿ.1 ರಿಂದ 20 ಎಂದು ಮತ್ತು ಎಂ.ಒ.1 ರಿಂದ 9 ರಂತೆ ಮುದ್ದೆಮಾಲುಗಳನ್ನು ಗುರುತಿಸಿಕೊಂಡಿರುತ್ತಾರೆ.

7. ಅಭಿಯೋಜನೆ ಸಾಕ್ಷಿದಾರರ ಸಾಕ್ಷಿನುಡಿಯಲ್ಲಿ ಆರೋಪಿತರ ವಿರುದ್ಧ ಯಾವುದೇ ಆರೋಪ ಹೊರಿಸುವ ಸಾಕ್ಷ್ಯಾಧಾರಗಳು ಕಂಡುಬರದಿದ್ದರಿಂದ ಭಾರತ ದಂಡ ಪ್ರಕ್ರೀಯ ಸಂಹಿತೆ 313 ರ ಅನ್ವಯ ಆರೋಪಿತರ ವಿಚಾರಣೆಯನ್ನು ವಿನಾಯಿತಿಗೊಳಿಸಲಾಯಿತು.

8. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

9. ಈ ಕೆಳಕಂಡ ಅಂಶಗಳು ನನ್ನ ಗಮನಕ್ಕೆ ಬಂದಿರುತ್ತದೆ.

1) ದಿನಾಂಕ 280.08.2022 ರಂದು ಬೇಲೂರು ತಾಲ್ಲೂಕು ಮಾದಿಹಳ್ಳಿ ಹೋಬಳಿ, ಅಂಗಡಿಹಳ್ಳಿ ಗ್ರಾಮದಲ್ಲಿ ಆರೋಪಿ ಸ್ಫೋಟಕ ವತ್ತು ಸ್ಫೋಟಿಸಿ ವ್ಯಕ್ತಿ ಮತ್ತು ವಸ್ತುಗಳಿಗೆ ಅಪಾಯ ಉಂಟಾಗುತ್ತದೆ ಎನ್ನುವ ಅರಿವು ಇದ್ದೂ ಸಹ ಚಾಸಾ.2 ಮಂದಾಕಿನಿರವರ ಮನೆಯ ಮೇಲಿನ ಸಿಮೆಂಟ್ ಶೀಟ್ ಮೇಲೆ ಸ್ಫೋಟಕ ವಸ್ತು ತುಂಬಿದ್ದ

ಡಬ್ಬಿಯನ್ನು ನಿರ್ಲಕ್ಷತೆಯಿಂದ ಒಣಗಲು ಇಟ್ಟು ಸ್ಫೋಟಕ ವಸ್ತುಗಳ ಕಾಯಿದೆ ಕಲಂ 3(ಎ) ಮತ್ತು 4(ಬಿ)(i)ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆ ಎನ್ನುವುದನ್ನು ಅಭಿಯೋಜನೆಯು ನಿಸ್ಸಂದೇಹಾತೀತವಾಗಿ ಸಾಭೀತುಪಡಿಸುವವರೇ?

2) ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ ಆರೋಪಿ ಈ ಮೇಲೆ ಹೇಳಿದಂತೆ ಇಟ್ಟ ಸ್ಫೋಟಕ ವಸ್ತು ಅದೇ ದಿನ ಸಿಡಿದು ಚಾಸಾ.2 ರವರ ಮನೆಯ ಮೇಲ್ಛಾಗದ ಸಿಮೆಂಟ್ ಶೀಟ್ ಛಿದ್ರಗೊಂಡು ಮನೆಯ ಒಳಗೆ ಹಾರಿ, ಸದರಿ ಮನೆಗೆ ನಷ್ಟ ಉಂಟಾಗಿರುತ್ತದೆ ಮತ್ತು ಕಾರಣದಿಂದ ಆರೋಪಿ ಭಾರತ ದಂಡ ಸಂಹಿತೆ ಕಲಂ 427 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆ ಎನ್ನುವುದನ್ನು ಅಭಿಯೋಜನೆಯು ನಿಸ್ಸಂದೇಹಾತೀತವಾಗಿ ಸಾಭೀತುಪಡಿಸುವವರೇ?

3) ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ಹೇಳಿದಂತೆ ನಿಮ್ಮ ನಿರ್ಲಕ್ಷ್ಯತನದಿಂದ ಸ್ಫೋಟಕ ವಸ್ತುಗಳನ್ನು ಒಣಗಲು ಇಟ್ಟು ಸದರಿ ಸ್ಫೋಟಕ ಮತ್ತ ಸಿಡಿದು ಸದರಿ ಮನೆಯ ಒಳಗಡೆ ಇದ್ದ ಚಾಸಾ.2 ರವರ ಬಲಗೆನ್ನೆ ಹಣೆಯ ಬಲಭಾಗ ಮತ್ತು ಗದ್ದಕ್ಕೆ ಸಮಾನ್ಯ ಸ್ವರೂಪದ ಗಾಯ ಮತ್ತು ಎಡಗೈಗೆ ತೀವ್ರಸ್ವರೂಪದ ಗಾಯ, ಚಾಸಾ.4 ನೇಯವರ ಕುತ್ತಿಗೆಗೆ ಸಾಮಾನ್ಯ ಸ್ವರೂಪದ ಗಾಯ ಹಾಗೂ ಚಾಸಾ.4 ನೇಯವರ 11 ದಿನದ ಮಗುವಿಗೆ ಕೆನ್ನೆಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದು ಆರೋಪಿಯ ನಿರ್ಲಕ್ಷತನದಿಂದಾಗಿ ಈ ಮೇಲೆ ಹೇಳಿದ ಸಾಕ್ಷಿದಾರರಿಗೆ ಗಾಯವಾಗಿ ಅಪಾಯವಾಗಿರುತ್ತದೆ ಆದ್ದರಿಂದ ಆರೋಪಿ ಭಾರತ ದಂಡ ಸಂಹಿತೆ ಕಲಂ 286 ರ ಅಡಿಯಲ್ಲಿ

ಅಪರಾಧ ಮಾಡಿರುತ್ತಾರೆ ಎನ್ನುವುದನ್ನು ಅಭಿಯೋಜನೆಯು ನಿಸ್ಸಂದೇಹಾತೀತವಾಗಿ ಸಾಭೀತುಪಡಿಸುವವರೇ?

4) ಏನು ಆದೇಶ?

10. ಈ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತಿದೆ.

ಅಂಶ.1: ನಕರಾತ್ಮಕ,
ಅಂಶ.2: ನಕರಾತ್ಮಕ,
ಅಂಶ.3: ನಕರಾತ್ಮಕ,
ಅಂಶ.4: ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

11. ಅಂಶ.1 ರಿಂದ 3: ಈ ಎಲ್ಲಾ ಆಂಶಗಳು ಒಂದಕ್ಕೊಂಡು ಸಂಬಂಧಪಟ್ಟಿರುವುದರಿಂದ ಅವುಗಳನ್ನು ಚರ್ಚಿಸುವ ಸಮಯದಲ್ಲಿ ವಸ್ತು ವಿಷಯ, ಸಾಕ್ಷ್ಯಧಾರಗಳು, ಕಾನೂನಿನ ಆಂಶಗಳು ಪುನರಾವರ್ತನೆ ಆಗುವುದನ್ನು ತಪ್ಪಿಸುವ ಸಲುವಾಗಿ ಇವೆಲ್ಲವನ್ನು ಎಕಕಾಲದಲ್ಲಿ ಚರ್ಚಿಸಲು ತೀರ್ಮಾನಿಸಿ ತೆಗೆದುಕೊಂಡಿರುತ್ತೇನೆ.

12. ಅಸಾ.1/ಕೀರ್ತಿರಾಜ್ ದೂರುದಾರರಾಗಿದ್ದು ತನ್ನ ಸಾಕ್ಷಿಯಲ್ಲಿ ತನಗೆ ಆರೋಪಿ ಮಾವನಾಗಬೇಕು ಅವರು ಆಯುರ್ವೇದಿಕ್

ಎಣ್ಣೆಯನ್ನು ತಯಾರು ಮಾಡಿ ಮಾರಾಟ ಮಾಡುತ್ತಾರೆ. ತನ್ನ ಹೆಂಡತಿ, ಅತ್ತೆ ಮತ್ತು ಮಗನಿಗೆ ಸ್ಫೋಟ ಆಗಿ ಯಾವುದೇ ಏಟು ಆಗಿರುವುದಿಲ್ಲ ಆರೋಪಿತರು ಹಂದಿಗಳನ್ನು ಸಾಯಿಸಲು ಕಛ್ಛಾ ಸ್ಫೋಟ ಉಂಡೆಯನ್ನು ತಯಾರು ಮಾಡುತ್ತಿದ್ದ ವಿಚಾರ ತನಗೆ ಗೊತ್ತಿಲ್ಲ. ಆರೋಪಿತರ ಮನೆ ತನ್ನ ಹೆಂಡತಿ ಮನೆಯ ಪಕ್ಕದಲ್ಲಿ ಇರವುದಿಲ್ಲ. ಆರೋಪಿತರು ಈ ರೀತಿಯ ಸ್ಫೋಟಕದ ಉಂಡೆಯನ್ನು ತಯಾರು ಮಾಡಿ ಇಟ್ಟಿದ್ದ ಉಂಡೆ ಸಿಡಿದು ತನ್ನ ಹೆಂಡತಿ, ಅತ್ತೆ ಮತ್ತು ಮಗುವಿಗೆ ಗಾಯವಾಗಿಲ್ಲ. ಈ ರೀತಿ ಗಾಯ ಆಗಿದೆ ಎಂದು ತಾನು ಪೋಲಿಸರಿಗೆ ಯಾವುದೇ ದೂರು ಕೊಟ್ಟಿಲ್ಲ. ನಿಪಿ.1 ಕ್ಕೆ ಸಹಿಯನ್ನು ಹಗರೆಯಲ್ಲಿ ಹಾಕಿರುತ್ತೇನೆ ಏಕೆ ಹಾಕಿರುತ್ತೇನೆ ಎಂದು ಗೊತ್ತಿಲ್ಲ. ತನ್ನ ಹೆಂಡತಿ, ಅತ್ತೆ ಮತ್ತು ಮಗುವಿಗೆ ಸ್ಫೋಟಕದಿಂದ ಗಾಯವಾಗಿದೆ ಎಂದು ಅವರನ್ನು ನಾನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಿಲ್ಲ ಎಂದು ನುಡಿದಿರುತ್ತಾರೆ.

13. ಅಸಾ.2/ಮಂದಾಕಿನಿ ಗಾಯಾಳು ತಮ್ಮ ಸಾಕ್ಷಿಯಲ್ಲಿ ಚಾಸಾ.1 ತಮ್ಮ ಆಳಿಯ ಆರೋಪಿತರ ಮನೆ ತಮ್ಮ ಮನೆಯಿಂದ ನಾಲ್ಕೈದು ಮನೆಯ ದೂರದಲ್ಲಿರುತ್ತದೆ. ಸುಮಾರು ಎರಡೂವರೆ ವರ್ಷಗಳ ಹಿಂದೆ ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಊಟ ಮಾಡುತ್ತಿದ್ದಾಗ ಮನೆಯ

ಚಾವಣಿಯಿಂದ ಶಬ್ಧ ಬಂತು ತನಗೂ ಚಾಸಾ.3, 4 ಮತ್ತು ಅವರ ಮಕ್ಕಳಿಗೂ ಏಟಾಗಿತ್ತು, ನಾವೆಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದೆವು ಆದರೆ ಯಾವ ಕಾರಣದಿಂದ ಚಾವಣಿಯಿಂದ ಶಬ್ದಬಂತು ಎಂದು ಗೊತ್ತಿಲ್ಲ ಆರೋಪಿ ಹಂದಿಗಳನ್ನು ಸಾಯಿಸಲು ಕಛ್ಚಾ ಸ್ಫೋಟ ಉಂಡೆಯನ್ನು ತಯಾರು ಮಾಡುತ್ತಿದ್ದ ವಿಚಾರ ಗೊತ್ತಿಲ್ಲ, ಆರೋಪಿತರು ಆ ರೀತಿ ಸ್ಫೋಟಕ ಉಂಡೆಯನ್ನು ತಯಾರು ಮಾಡಿ ಒಣಗಿಸಲು ಇಟ್ಟಿದ್ದ ಉಂಡೆ ಸಿಡಿದು ತನಗೂ ಚಾಸಾ.3 ಮತ್ತು 4 ಹಾಗೂ ಅವರ ಮಕ್ಕಳಿಗೂ ಗಾಯವಾಗಿಲ್ಲ, ಆ ಕಾರಣಕ್ಕಾಗಿ ತಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದು ನುಡಿಯುತ್ತಾರೆ

14. ಅಸಾ.3/ಅಶ್ವಿನಿ ಗಾಯಾಳು ಆಗಿದ್ದು ತಮ್ಮ ಸಾಕ್ಷಿಯಲ್ಲಿ ಆರೋಪಿ ತನ್ನ ಚಿಕ್ಕಪ್ಪ. ಸುಮಾರು 2 ವರ್ಷಗಳ ಹಿಂದೆ ಬೆಳಿಗ್ಗೆ 10-30 ರಿಂದ 11.00 ಗಂಟೆ ಸಮಯದಲ್ಲಿ ಊಟ ಮಾಡುತ್ತಿದ್ದಾಗ ಮನೆಯ ಚಾವಣಿಯಿಂದ ಶಬ್ಧಬಂತು ಅದರಿಂದಾಗಿ ತನಗೆ ಚಾಸಾ.2, 4 ಮತ್ತು ತನ್ನ ಮಕ್ಕಳಿಗೆ ಏಟಾಗಿತ್ತು ತಾವು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದೆವು ಯಾವ ಕಾರಣದಿಂದ ಚಾವಣಿಯಲ್ಲಿ ಶಬ್ಧಬಂತು ಎಂದು ಗೊತ್ತಿಲ್ಲ. ಆರೋಪಿತರ ಮನೆ ತಮ್ಮ ಮನೆಯ ಪಕ್ಕದಲ್ಲಿ ಇರುವುದಿಲ್ಲ. ಆರೋಪಿತರು

ಹಂದಿಗಳನ್ನು ಸಾಯಿಸಲು ಕಛ್ಚಾ ಸ್ಫೋಟಕದ ಉಂಡೆಯನ್ನು ತಯಾರು ಮಾಡುತ್ತಿದ್ದ ವಿಚಾರ ತನಗೆ ಗೊತ್ತಿಲ್ಲ ಮತ್ತು ಆರೋಪಿತರು ಆ ರೀತಿ ತಯಾರಿಸಿದ ಉಂಡೆಯನ್ನು ಒಣಗಿಸಲು ಇಟ್ಟಿದ್ದು ಅದು ಸಿಡಿದು ತನಗೂ ತನ್ನ ಮಗುವಿಗೂ ಮತ್ತು ಚಾಸಾ.2, ಚಾಸಾ.4 ರವರಿಗೂ ಅವರ ಮಗುವಿಗೂ ಗಾಯವಾಗಿದೆ ಎಂದು ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯಲಿಲ್ಲ ಎಂದು ನುಡಿದಿರುತ್ತಾರೆ.

15. ಅಸಾ.4/ರೋಜಾ ತಮ್ಮ ಸಾಕ್ಷಿಯಲ್ಲಿ ಆರೋಪಿ ತನ್ನ ಚಿಕ್ಕಪ್ಪ. ಸುಮಾರು ಎರಡು ವರ್ಷಗಳ ಹಿಂದೆ ತಾನು ಮನೆಯಲ್ಲಿದ್ದಾಗ ನನಗೆ ಕುತ್ತಿಗೆ ಬಳಿ ಏಟಾಗಿತ್ತು ಹೇಗಾಯಿತು ಎಂದು ನನಗೆ ಗೊತ್ತಿಲ್ಲ ತನ್ನ ಮಕ್ಕಳಿಗೂ ಏಟಾಗಿತ್ತು ಹಂದಿಗಳನ್ನು ಸಾಯಿಸಲು ಆರೋಪಿ ಕಛ್ಚಾ ಸ್ಫೋಟಕ ಉಂಡೆ ತಯಾರಿಸಿದ ವಿಚಾರ ಗೊತ್ತಿಲ್ಲ. ಅವರ ಮನೆ ನನ್ನ ಮನೆಯ ಪಕ್ಕದಲ್ಲಿಲ್ಲ. ಆರೋಪಿತರು ಸ್ಫೋಟಕದ ಉಂಡೆಯನ್ನು ಒಣಗಿಸಲು ಇಟ್ಟಿದ್ದು ಅದರ ಉಂಡೆ ಸಿಡಿದು ನಮಗೆ ಗಾಯವಾಗಿಲ್ಲ ಆ ಕಾರಣಕ್ಕಾಗಿ ನಾವು ಚಿಕಿತ್ಸೆ ಪಡೆದಿಲ್ಲ ಎಂದು ನುಡಿದಿರುತ್ತಾರೆ.

16. ಈ ಪ್ರಮುಖ ಸಾಕ್ಷಿಗಳನ್ನು ಮಾನ್ಯ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀಸವಾಲುಗಳನ್ನು ಮಾಡಿದಾಗ ಈ 4 ಸಾಕ್ಷಿದಾರರು ಆರೋಪಿತರನ್ನು ಅಪರಾಧದಲ್ಲಿ ಸಿಕ್ಕಿಸುವಂತ ಯಾವುದೇ ಹೇಳಿಕೆಗಳನ್ನು ನೀಡಿಲ್ಲ.

17. ಅಭಿಯೋಜನೆಯು ಅಸಾ.7/ಚಿನ್ನು ರವರನ್ನು ಈ ಪ್ರಕರಣದ ಪ್ರತ್ಯಕ್ಷಃ ಸಾಕ್ಷಿ ಎಂದು ವಿಚಾರಣೆ ನಡೆಸಿದ್ದು ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಆರೋಪಿತರ ಪರಿಚಯ ಇದೆ. ಆರೋಪಿತರು ಮತ್ತು ಚಾಸಾ.1 ರಿಂದ 4 ರವರ ಪರಿಚಯವಿದೆ. ಅವರ ಮನೆ ಅಕ್ಕಪಕ್ಕದಲ್ಲಿರುತ್ತದೆ, ಚಾಸಾ.1 ರಿಂದ 4 ರವರಿಗೆ ಹೇಗೆ ಗಾಯಗಳಾಗಿತ್ತೆಂದು ತನಗೆ ಗೊತ್ತಿಲ್ಲ ಆರೋಪಿ ಹಂದಿಗಳನ್ನು ಸಾಯಿಸಲು ಕಛ್ಚಾ ಸ್ಫೋಟಕವನ್ನು ತಯಾರಿಸಿದ ವಿಚಾರ ನನಗೆ ಗೊತ್ತಿಲ್ಲ ಮತ್ತು ಆರೋಪಿತರು ಇಟ್ಟಿದ್ದ ಉಂಡೆ ಸಿಡಿದು ಚಾಸಾ.1 ರಿಂದ 4 ರವರಿಗೆ ಏಟಾಗಿದ್ದು ತಾನು ನೋಡಿಲ್ಲ ಎಂದು ಹೇಳಿರುತ್ತಾರೆ ಇವರನ್ನು ಕೂಡ ಅಭಿಯೋಜನೆಯು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ ಆರೋಪಿತರನ್ನು ಅಪರಾಧಕ್ಕೆ

ಸಿಕ್ಕಿಸುವಂತಹ ಯಾವುದೇ ಸಾಕ್ಷ್ಯನುಡಿಯನ್ನು ಈ ಸಾಕ್ಷಿ ನುಡಿದಿರುವುದಿಲ್ಲ.

18. ಆಸಾ.6 ಹಾಸನ ಸ್ಪರ್ಶ ಆಸ್ಪತ್ರೆಯ ವೈದಾಧಿಕಾರಿಗಳಾದ ಡಾ.ಜಿ.ಎಸ್. ಶ್ರೀಧರ್ ದಿನಾಂಕ 28.08.2022 ರಂದು ನಾನು ಸದರಿ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ ಸುಮಾರು 2.45 ಗಂಟೆಗೆ ಮಂದಾಕಿನಿ, ಅಶ್ವಿನಿ, ರೋಜ ಮತ್ತು ಅವರ 11 ದಿನದ ಮಗು ಮತ್ತು ಬೇಬಿ ಶಿವನ್ಯರವರು ಸ್ಫೋಟದ ಹಿನ್ನಲೆಯಲ್ಲಿ ಗಾಯಾಗೊಂಡಿದ್ದಾರೆಂದು ಚಿಕಿತ್ಸೆಗಾಗಿ ಬಂದಿದ್ದರು, ಮಂದಾಕಿನಿಯನ್ನು ತಾನು ಪರೀಕ್ಷೆ ಮಾಡಿದಾಗ 3 x 1 x 0.5 ಸೆಂಮಿ ಆಳತೆಯ ಹರಿದ ಗಾಯ ತಲೆಯ ಬಲಭಾಗದಲ್ಲಿ, 3 x 1 x 0.5 ಸೆಂಮಿ ಆಳತೆಯ ಹರಿದ ಗಾಯ ಬಲಕೆನ್ನೆಯಲ್ಲಿ, 1 x 0.5 ಸೆಂಮಿ ಆಳತೆಯ ತರಚು ಗಾಯ ಮೂಗಿನ ಮೇಲೆ, 3 x 2 x 2 ಸೆಂಮಿ ಆಳತೆಯ ಹರಿದ ಗಾಯ ಕುತ್ತಿಗೆಯ ಬಲಭಾಗದಲ್ಲಿತ್ತು, 4 x 1 x 1 ಸೆಂಮಿ ಆಳತೆಯ ಹರಿದ ಗಾಯ ತಲೆಯ ಬಲಭಾಗದಲ್ಲಿ, 5 x 3 x 2 ಸೆಂಮಿ ಆಳತೆಯ ಹರಿದ ಗಾಯ

ಎಡ ಕೈಯಲ್ಲಿ ಕಂಡುಬಂತು. ಹಾಗೇಯೇ ಗಾಯದ ಎಕ್ಸರೇ ಮಾಡಿಸಿದಾಗ ಗಂಟಲಿನ ಮೇಲ್ಭಾಗದಲ್ಲಿ ಮುರಿತ ಕಂಡುಬಂತು ತಲೆಯ ಬಲಭಾಗದ ಸಾಫ್ಟ್ ಟಿಶ್ಯೂ ಇಂಜುರಿ ಕಂಡುಬಂತು. ಬಲಕೆನ್ನೆಯಲ್ಲಿ ಮತ್ತು ಮೂಗಿನ ಪಕ್ಕದಲ್ಲಿ ಸಾಫ್ಟ್ ಟಿಶ್ಯೂ ಇಂಜುರಿ ಕಂಡುಬಂತು. ಅದರಲ್ಲಿ ಒಂದನೇ ಗಾಯವು ಸಹ ತೀವ್ರ ಸ್ವರೂಪದ್ದಾಗಿದೆ ಎಂದು ನುಡಿಯುತ್ತಾರೆ. ಮುಂದುವರೆದು ಅಶ್ವಿನಿ ಎಂಬ ಗಾಯಾಳನ್ನು ಪರೀಕ್ಷಿಸಿದಾಗ 5 x 2 x 1 ಸೆಂಮಿ ಆಳತೆಯ ಹರಿದ ಗಾಯ ತಲೆಯ ಬಲಭಾಗದಲ್ಲಿ, 5 x 1 ಸೆಂಮಿ ಆಳತೆಯ ತರಚು ಗಾಯ ಬಲತೊಡೆಯಲ್ಲಿ ಕಂಡುಬಂತು ಹಾಗೂ ಬಲಭುಜ ಮತ್ತು ಎಡಗೈಯಲ್ಲಿ ನೋವಿತ್ತು. ಈ ಗಾಯಗಳು ಸಾಮಾನ್ಯ ಸ್ವರೂಪ್ಪದ್ದಾಗಿತ್ತು ಎಂದು ನುಡಿದಿರುತ್ತಾರೆ. ಮುಂದುವರೆದು ರೋಜಾ ಎಂಬ ಗಾಯಾಳುವನ್ನು ಪರೀಕ್ಷಿಸಿದಾಗ 3 x 1 x 1 ಸೆಂಮಿ ಆಳತೆಯ ಹರಿದ ಗಾಯ ಕುತ್ತಿಗೆಯ ಎಡಭಾಗದಲ್ಲಿ, 3 x 2 ಸೆಂಮಿ ಆಳತೆಯ ತರಚು ಗಾಯ ಎಡರುಂಡಿಯಲ್ಲಿ ಕಂಡುಬಂತು ಈ ಗಾಯಗಳು ಕೂಡ ಸಾಮಾನ್ಯ ಸ್ವರೂಪದ್ದಾಗಿವೆ ಎಂದು ನುಡಿದಿರುತ್ತಾರೆ. ಹಾಗೇಯೇ ರೋಜಾ

ಎಂಬುವವರ 9 ದಿನದ ಮಗುವನ್ನು ಪರೀಕ್ಷಿಸಿದಾಗ ಬಲಕೆನ್ನೆಯಲ್ಲಿ 4 x 3 x 0.5 ಸೆಂಮಿ ಆಳತೆಯ ಹರಿದ ಗಾಯ ಕಂಡುಬಂತು, ಸದರಿ ಗಾಯಕೂಡ ಸಾಮಾನ್ಯ ಸ್ವರೂಪದೆಂದು ನುಡಿದಿರುತ್ತಾರೆ. ಹಾಗೇಯೇ ನಾನು ಶಿವಣ್ಣ ಎಂಬ ಗಾಯಳುವನ್ನು ಪರೀಕ್ಷಿಸಿದಾಗ 2 x 1 x 1 ಸೆಂಮಿ ಆಳತೆಯ ಹರಿದ ಗಾಯ ಎಡತೊಡೆಯಲ್ಲಿತ್ತು, 2 x 2 x 2 ಸೆಂಮಿ ಆಳತೆಯ ತರಚು ಗಾಯ ತಲೆಯ ಎಡಬದಿಯಲ್ಲಿ ಕಂಡುಬಂತು. ಈ ಗಾಯಗಳು ಕೂಡ ಸಾಮಾನ್ಯ ಸ್ವರೂಪದ್ದೆಂದು ನುಡಿದಿರುತ್ತಾರೆ. ಮುಂದುವರೆದು, ಈ ಬಗ್ಗೆ ತಾನು ಗಾಯದ ಪ್ರಮಾಣಪತ್ರವನ್ನು ನಿ.ಪಿ.11 ರಂತೆ ಪೋಲಿಸರಿಗೆ ನೀಡಿರುತ್ತೇನೆ. ನಿಪಿ.12 ಗಾಯಾಳು ಮಂದಾಕಿನಿಯ ಸ್ಕ್ಯಾನಿಂಗ್ ವರದಿಯಾಗಿರುತ್ತದೆ. ಈ ಎಲ್ಲಾ ಗಾಯಗಳು ಸ್ಫೋಟಕ ವಸ್ತು ಸಿಡಿದಾಗ ಆಗುವ ಸಾಧ್ಯತೆ ಇದೆ ಎಂದು ನುಡಿದಿರುತ್ತಾರೆ.

19. ಇವರನ್ನು ಆರೋಪಿತರ ವಕೀಲರು ಪಾಟೀಲಸವಾಲು ಮಾಡಿದಾಗ ಅನಿಲ ಸೋರಿಕೆಯಾಗಿ ಸ್ಫೋಟಗೊಂಡಲ್ಲಿ ಈ ರೀತಿಯ

ಗಾಯಗಳು ಆಗುವ ಸಾಧ್ಯತೆ ಇರಬಹುದು ಎಂದು ನುಡಿದಿರುತ್ತಾರೆ. ಪ್ರಮುಖ ಸಾಕ್ಷಗಳು ಹಾಗೂ ಗಾಯಾಳುಗಳಾದ ಆಸಾ.1 ರಿಂದ 5 ರವರು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದು ಆರೋಪಿತರ ಮೇಲೆ ಮಾಡಿರುವ ಆಪಾಧನೆಯನ್ನು ಸ್ವತಂತ್ರ ಸಾಕ್ಷಿಯಾಗಿದ್ದ ಆಸಾ.7 ರವರು ಕೂಡ ಪುಷ್ಟೀಕರಿಸದೇ ಇರುವುದರಿಂದ ಮತ್ತು ಈ ವೈದ್ಯಾಧಿಕಾರಿಗಳು ತಮ್ಮ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನಲ್ಲಿ ಗಾಯಾಳುಗಳ ದೇಹದಲ್ಲಿ ಕಂಡುಬಂದ ಗಾಯಗಳ ಕಾರಣಗಳ ಬಗ್ಗೆ ದ್ವಂಧ ಹೇಳಿಕೆಯನ್ನು ಹೇಳಿರುವುದರಿಂದ ವೈದ್ಯಾಧಿಕಾರಿಗಳ ಸಾಕ್ಷಿನುಡಿಯು ಆರೋಪಿತರ ಮೇಲೆ ಇರುವ ಆರೋಪವನ್ನು ಸಾಭೀತುಪಡಿಸಲು ಯಾವುದೇ ರೀತಿಯಲ್ಲೂ ಸಹಕಾರಿಯಾಗುವುದಿಲ್ಲ ಎಂದು ಅಭಿಪ್ರಾಯಪಡುತ್ತೇನೆ.

20. ಆಸಾ.8 ಹಳೇಬೀಡು ಪಿ.ಎಸ್.ಐ. ಅಂದಿನ ಪೋಲಿಸ್ ಕಾನ್ಸಟೇಬಲ್ ಅಭಿಷೇಕ್ ರವರು ದಸ್ತಗಿರಿಯಾದ ಆರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಬಗ್ಗೆ ಮತ್ತು ಮೈಸೂರಿನ ಆರ್.ಎಫ್.ಎಸ್.ಎಲ್.ಗೆ ಕೊಟ್ಟು ಬಂದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

ಆಸಾ.10 ರವರು ಮೈಸೂರಿನ ಆರ್.ಎಫ್.ಎಸ್.ಎಲ್.ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹಿರಿಯ ವೈಜ್ಞಾನಿಕ ಅಧಿಕಾರಿ ಡಾ. ಗಾಯಿತ್ರಿಯವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 08.09.2022 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಸುಮಾರು 8 ಸೀಲಾದ ವಸ್ತುಗಳನ್ನು ಹಳಬೀಡು ಪೋಲಿಸ್ ಠಾಣೆಯ ಪೋಲಿಸ್ ಕಾನ್ಸಟೇಬಲ್ ಅಭಿಷೇಕ್ ರವರು ಅರಸೀಕೆರೆ ಪೋಲಿಸ್ ಉಪಾಧೀಕ್ಷಕರ ಕೋಕೆಯ ಮೇರೆಗೆ ಮತ್ತು ಮಾದರಿ ಸೀಲಿನೊಂದಿಗೆ ತಮ್ಮ ಕಛೇರಿಯ ಸ್ವಾಗತ ವಿಭಾಗಕ್ಕೆ ಹಾಜರುಪಡಿಸಿದ್ದನ್ನು ತಾನು ಸ್ವೀಕರಿಸಿ ವಿಶ್ಲೇಷಣೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ-3 ಮಣ್ಣು ಮತ್ತು ದಾರದ ಚೂರುಗಳು, ವಸ್ತು ಸಂಖ್ಯೆ-4 ಮನೆಯ ಒಳಗಡೆ ಸಂಗ್ರಹಿಸಿದ ದಾರದ ತುಂಡುಗಳು, ವಸ್ತು ಸಂಖ್ಯೆ-6 ಸ್ಫೋಟಗೊಂಡ ಸಣ್ಣ ಸಣ್ಣ ತುಂಡುಗಳಲ್ಲಿ ಸ್ಫೋಟಕದ ಅಂಶವಿರುವುದು ಕಂಡುಬಂತು ಹಾಗೇಯೇ ವಸ್ತು ಸಂಖ್ಯೆ-1 ಪ್ಲಾಸ್ಟಿಕ್ ಕವರಿನ ತುಣುಕುಗಳು, ವಸ್ತು ಸಂಖ್ಯೆ-2 ತುಂಡಾದ ಸಿಮೆಂಟ್ ಶೀಟಿನ ಪೀಸುಗಳು, ವಸ್ತು ಸಂಖ್ಯೆ-5 ಘಟನಾ ಸ್ಥಳದಲ್ಲಿ ಹತ್ತಿಯಿಂದ ಸಂಗ್ರಹಿಸಿದ ಸ್ವಾಬ್, ವಸ್ತು ಸಂಖ್ಯೆ-7 ಮತ್ತು ವಸ್ತು ಸಂಖ್ಯೆ-8 ಮಾದರಿ ಸ್ವಾಬ್ ನಲ್ಲಿ

ಯಾವುದೇ ಸ್ಫೋಟಕ ಆಂಶಗಳು ಕಂಡುಬರಲಿಲ್ಲ ಎಂದು ನುಡಿದಿರುತ್ತಾರೆ.

21. ಆಸಾ.10 ಹಳೇಬೀಡು ಪೋಲಿಸ್ ಠಾಣೆಯ ಅಂದಿನ ಪ್ರಭಾರ ಪಿ.ಎಸ್.ಐ. ಸರ್ದಾರ್ ಪಾಷಾರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 28.08.2022 ರಂದು ಚಾಸಾ.1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ನಿಪಿ.1 ರಂತೆ ನೀಡಿರುತ್ತಾರೆ. ಅದನ್ನು ತಾನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 187/2022 ರಂತೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುವುದಾಗಿ ಹೇಳಿರುತ್ತಾರೆ.

22. ಆಸಾ.11 ಹಳೇಬೀಡು ಪೋಲಿಸ್ ಠಾಣೆಯ ಅಂದಿನ ಪಿ.ಎಸ್.ಐ. ದೇವರಾಜು ಕೆ.ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಕಡತವನ್ನು ಆಸಾ.10 ರವರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿ ತಾನು ಕೃತ್ಯ ಸ್ಥಳಕ್ಕೆ ಭೇಟಿಕೊಟ್ಟು ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದ

ಬಗ್ಗೆ ಸ್ಥಳಕ್ಕೆ ತಜ್ಞರನ್ನು ಕರೆಯಿಸಿ ಅವರ ಮೂಲಕ ಎಂ.ಒ.2 ರಿಂದ 8 ನ್ನು ವಶಪಡಿಸಿಕೊಂಡ ಬಗ್ಗೆ ಮತ್ತು ಕಚ್ಚಾ ನಕಾಶೆ ನಿಪಿ.16 ರಂತೆ ತಯಾರಿಸಿದ ಬಗ್ಗೆ ಮಹಜರು ಕಾಲದಲ್ಲಿ ನಿಪಿ.16 ಮತ್ತು 18 ರಂತೆ ಫೋಟೋಗಳನ್ನು ತೆಗೆದ ಬಗ್ಗೆ ವಶಪಡಿಸಿಕೊಂಡ ವಸ್ತುಗಳನ್ನು ಪ್ಯಾಕು ಮಾಡಿ ಸೀಲು ಮಾಡಿ ಪಂಚರ ಸಹಿ ಪಡೆದ ಬಗ್ಗೆ ಮತ್ತು ತನಿಖಾ ಕಾಲದಲ್ಲಿ ತೆಗೆದ ಫೋಟೋಗಳಿಗೆ ಸಂಬಂಧಿಸಿದಂತೆ ಭಾರತ ಸಾಕ್ಷ್ಯ ಅಧಿನಿಯದ ಕಲಂ 65 ಬಿ ರಂತೆ ದೃಡಪತ್ರವನ್ನು ಪಡೆದುಕೊಂಡ ಬಗ್ಗೆ, ಆರೋಪಿತರನ್ನು ಪತ್ತೆ ಹಚ್ಚಿ ತನ್ನ ಮುಂದೆ ಸಿಬ್ಬಂದಿಗಳು ಹಾಜರುಪಸಡಿಸಿದ ಬಗ್ಗೆ ಆರೋಪಿತರನ್ನು ವಿಚಾರಣೆ ಮಾಡಿ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡ ಬಗ್ಗೆ ಮತ್ತು ವಶಪಡಿಸಿಕೊಂಡ ಮಾಲನ್ನು ಆರ್.ಎಫ್.ಎಸ್.ಎಲ್. ಮೈಸೂರಿಗೆ ಕಳುಹಿಸಿ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿದ ಬಗ್ಗೆ ನುಡಿದಿರುತ್ತಾರೆ.

23. ಆಸಾ.12 ಹಳೇಬೀಡು ವೃತ್ತದ ಅಂದಿನ ವೃತ್ತ ನಿರೀಕ್ಷಕರಾದ ಎಸ್.ಎನ್. ಶ್ರೀಕಾಂತ್ ರವರು ತಮ್ಮ ಸಾಕ್ಷ್ಯದಲ್ಲಿ ಕಡತವನ್ನು

ಆಸಾ.11 ರವರಿಂದ ಸ್ವೀಕರಿಸಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ ಮತ್ತು ಗಾಯದ ಪ್ರಮಾಣಪತ್ರವನ್ನು ನಿಪಿ.11 ರಂತೆ ಸ್ವೀಕರಿಸಿದ ಬಗ್ಗೆ ಆರ್.ಎಫ್.ಎಸ್.ಎಲ್. ವರದಿಯನ್ನು ಸ್ವೀಕರಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

24. ಈ ಪ್ರಕರಣದಲ್ಲಿ ಈ ಮೇಲೆ ಹೇಳಿದಂತೆ ಪ್ರಮುಖ ಸಾಕ್ಷ್ಯಿದಾರರು, ದೂರುದಾರರು ಮತ್ತು ಗಾಯಾಳುಗಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರು ಯಾರೂ ಕೂಡ ಅಭಿಯೋಜನೆಯ ಕೇಸನ್ನು ಪುಷ್ಟೀಕರಿಸಿಲ್ಲ, ಹೀಗಿರುವಾಗ ತನಿಖಾಧಿಕಾರಿ ಆಸಾ.8 ರಿಂದ 12 ರವರ ಸಾಕ್ಷನುಡಿಯು ಈ ಪ್ರಕರಣದಲ್ಲಿ ಆರೋಪಿತರ ಅಪಾಧನೆಯನ್ನು ಸಾಭೀತುಪಡಿಸಲು ಪ್ರಮುಖ ಪಾತ್ರವನ್ನುವಹಿಸುವುದಿಲ್ಲ. ಆರೋಪಿತರ ಮೇಲೆ ಮಾಡಿರುವ ಅಪಾಧನೆಯನ್ನು ಪುಷ್ಟೀಕರಿಸಲು ಪ್ರಮುಖ ಸಾಕ್ಷಿದಾರರಾದ ಗಾಯಾಳುಗಳು, ದೂರುದಾರರು, ಪ್ರತ್ಯಕ್ಷ ಸಾಕ್ಷಿಗಳು ಪುಷ್ಟೀಕರಿಸಿದ್ದಲ್ಲಿ ಮಾತ್ರ ಆಸಾ.8 ರಿಂದ 12 ರವರ ಸಾಕ್ಷವು ಪ್ರಮುಖ ವಹಿಸುತ್ತದೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಆಂಶವೆಂದರೇ

ನಿಪಿ.7 ಮತ್ತು 8ರ ಫೋಟೋಗಳಿಗೆ ಸಂಬಂಧಿಸಿದಂತೆ ಅದರ ಪ್ರಾಥಮಿಕ ಸಾಕ್ಷ ಅಂದರೆ ನೆಗೆಟೀವ್ ಅಥವಾ ಸಿ.ಡಿ.ಯನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ನಿಪಿ.17 ಮತ್ತು 18 ನ್ನು ಪರಗಣಿಸಲು ಬರುವುದಿಲ್ಲ.

25. ಈ ಮೇಲೆ ಚರ್ಚಿಸಿದ ಅಂಶಗಳನ್ನು ಮತ್ತು ಸಾಕ್ಷ್ಯನುಡಿಯನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಆರೋಪಿತರನ್ನು ಅವರ ಮೇಲಿನ ಆಪಾಧನೆಯಲ್ಲಿ ಸಿಕ್ಕಿಸುವಂತಹ ಯಾವುದೇ ಬಲವಾದ ಸಾಕ್ಷಾಧಾರಗಳನ್ನು ಅಭಿಯೋಜನೆಯು ಹಾಜರುಪಡಿಸುವಲ್ಲಿ ವಿಫಲವಾಗಿದೆ ಅದ್ದರಿಂದ ಅಭಿಯೋಜನೆಯು ಆರೋಪಿತರ ಮೇಲೆ ಮಾಡಿರುವ ಅಪಾಧನೆಯನ್ನು ನಿಸ್ಸಂದೇಹಾತೀತವಾಗಿ ಸಾಭೀತುಪಡಿಸಲು ವಿಫಲರಾಗಿರುತ್ತಾರೆ ಎಂದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ ಆರೋಪಿಯು ಈ ಪ್ರಕರಣದಿಂದ ದೋಷಮುಕ್ತನೆಂದು ಬಿಡುಗಡೆಗೊಳಿಸಲು ಆರ್ಹನಾಗಿರುತ್ತಾನೆ. ಆದ್ದರಿಂದ ಈ ಅಂಶವನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

26. ಅಂಶ.**2**: ಮೇಲ್ಕಂಡ ಕಾರಣಗಳಿಗೋಸ್ಕರ, ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

## ಆದೇಶ

ದಂಡ ಪ್ರಕ್ರೀಯಾ ಸಂಹಿತೆ ಕಲಂ 235(1)ರಂತೆ ಆರೋಪಿತರನ್ನು ಭಾರತೀಯ ದಂಡ ಪ್ರಕ್ರೀಯಾ ಸಂಹಿತೆ ಕಲಂ 427, 286 ಮತ್ತು ಸ್ಪೋಟಕ ವಸ್ತುಗಳ ಕಾಯಿದೆ ಕಲಂ 4 ಮತ್ತು 3 ರನ್ವಯ ದಂಡನೀಯವಾದ ಅಪರಾಧಕ್ಕೆ ನಿರ್ಧೋಷಿಯೆಂದು ತೀರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತರು ಮತ್ತು ಅವರ ಪರವಾಗಿ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ರದ್ದುಗೊಳಿಸಲಾಗಿದೆ.

ಎಂ.1 ರಿಂದ 8 ನಿರುಪಯುಕ್ತ ವಸ್ತುಗಳಾಗಿದ್ದರಿಂದ ಅವುಗಳನ್ನು ಅಪೀಲು ಅವಧಿ ಮುಗಿದ ನಂತರ ನಾಶಗೊಳಿಸಲು ಅದೇಶಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚಾದ ನಂತರ ಅದನ್ನು ಓದಿ ತಪ್ಪುಗಳನ್ನು ತಿದ್ದುಪಡಿ ಮಾಡಿ ಇಂದು 12 ನೇ ಜೂನ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

HEMAVATHI Digitally signed by HEMAVATHI Date: 2026.06.25 17:33:59 +0530

(ಹೇಮಾವತಿ),
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾಸನ.